ಬೆಂಗಳೂರು ಡಿಸ್ಟ್ರಿಕ್ಟ್.

889

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜಿ ನಂಬರ್ 1029.

ಬೆಂಗಳೂರು ಕೋಟೆಯಲ್ಲಿ ವಾಸವಾಗಿಯಿದ್ದು ಮೃತಪಟ್ಟ ದಿವಾ ಕಛೇರಿ ಅಕೌಂಟ್ಯಾಂಟ್ ತಮ್ಮಂಣ ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತಮ್ಮಂಣ ರಾಮರಾವು ಮೃತಪಟ್ಟ ಸದರೀ ಸುಬ್ಬರಾಯರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ತಮ್ಮಂಣ ರಾಮರಾವು ಬೆಂಗಳೂರು ವಾಸಸ್ಥನಾಗಿ ಮೃತಪಟ್ಟ ತಮ್ಮಂಣ ಸುಬ್ಬರಾಯರ ಜಿಂದಗಿ. ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ತಮ್ಮಂಣ ರಾಮರಾಯರ ಅರ್ಜಿಯನ್ನು 1890ನೇ ಇಸವಿ ಜನವರೀ ತಿಂಗಳು ತಾರೀಖು 31ರ ಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಂಣ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಡಿಸಂಬರ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ವೊಪರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಲ್. ಅನಂತಸ್ವಾಮಿರಾವ್,
ಸಬ್ ಜಜ್ಜ.

ಬೆಂಗಳೂರು ಡಿವಿಜ್.

ಪ್ರಸಿದ್ಧ ಪತ್ರಿಕೆ.

ತಾರೀಖು 6ನೇ ಡಿಸಂಬರ್ 1889.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರಲ್ಲಿ ಹೊಸದಾಗಿ ತಯಾರಾಗತಕ್ಕ ರವಿನ್ಯೂ ಸರ್ವೆ ಆಫಿಸ್ ಕಾಮಗಾರಿ ಕಂಟ್ರಾಕ್ಟಿಗಾಗಿ ವೊಹರಾಗಿ ಬರುವ ದರಖಾಸ್ತುಗಳನ್ನು ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಜನವರಿ 6ನೇ ತಾರೀಖು ಪರಿಯಂತರ ಪಡಿಯಲ್ಪಡುವದು.

ಸುಮಾರು ಅಂದಾಜಿನ ಪರಿವೂಣವನ್ನು ಈ ಕೆಳಗೆ ನಮೂದಿಸಿ ಯಿಧೆ, ಈ ಪರಿಮಾಣವು ಗೊತ್ತಾದ್ದಲ್ಲಾ, ಕಾಮಗಾರಿಯು 1891ನೇ ಇಸವಿ ಜೂನ್ ಆಖೈರಿಗೆ ಪೂರೈಸತಕ್ಕದ್ದು.

2. ಸ್ಯಾಂಕ್ಷನ್ ಅಂದಾಜು ಮತ್ತು ಪರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ್ ಕೆಲಸವನ್ನು ಯಾವ ಯಾವ ವರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಬಂದು ಪಟ್ಟ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟ್ ಮೂಲಕವಾಗಲಿ ನಗದಾಗಲಿ 100 ರೂಪಾಯಿ ಡಿವಾಜಿಟನ್ನು ವಡಗೂಡಿ ಯಿರಬೇಕು. ಮತ್ತು ಬೆಂಗಳೂರಲ್ಲಿ ಹೊಸದಾಗಿ ತಯಾರಾಗುವ ರವಿನ್ಯೂ ಸರ್ವೆ ಆಫಿಸ್ ಕಾಮಗಾರಿ ದರಖಾಸ್ತುಯೆಂತ ಲಿಫಾಫೇ ಮೇಲೆ ಬರದುಯಿರಬೇಕು. ಹೀಗೆ ಯಿಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜನಿಯರ್ ಸಾಹೆಬರವರದಾಗಿ ಯಿಧೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನ ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳ ವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನ ಬರದುಕೊಡತಕ್ಕದ್ದು ಅವಶ್ಯವಾಗಿ ಯಿಧೆ. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದು ಆದಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿವಾಜಿಟ್ ವೊಬಲಗನ್ನ ಹೋಗಲಾಡಿಸಿ ಕೊಳ್ಳುವನು.

7. ಯಾವ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಐಯಿಂದ ಚಿಕಟಾಯಿಸಲ್ಪಡುವದು.

8. ದರಖಾಸ್ತುಗಳ ವೈಕಿ ಬಂದು ದರಖಾಸ್ತು ಮಂಜೂರಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಬಾಬುವಾರು.	ಅಂದಾಜಿಗೆ.	ದರ.	ಪರಿಮಾಣ.	ಗಾ ಗ್ರಾ
ಪಾಯಖೋದೀ ಕೆಲಸ	ಸಲೆಗಜ		906	
ಕಲ್ಲು ಸುಂಣದಿಂದ ಪಾಯಾಭರ್ತಿ ಜೇಸ್ ಮಟ್ಟ	ಸಲೆಅಡಿ		16290	
ಇಟ್ಟಿಗೆ ಸುಂಣದಿಂದ ಗೋಡೆ	ಡಿಟೋ		26608	
ಡಿಟೋ ಕವಾ೯ ಕೆಲಸ	ಡಿಟೋ		2430	
ಸದರೀ	ಡಿಟೋ		513	
ಸುಂಣದಿಂದ ಗಿಲಾವು	ಚದರ.		469·84	
ಸುಂಣದಿಂದ ನಂದುಗಾರೆ	ಡಿಟೋ		17·10	
ಸುಂಣ ಬಳೆಯುವದು	ಡಿಟೋ		196·90	
ಬಂಣ ಬಳೆಯುವದು	ಡಿಟೋ		272·94	
ಕಾರ್ನೀಸ್ (ವಂದೂವರೆ ಅಡಿ ಹೊರಡಿಸುವದು)	ಲಾಂಬಿ ಅಡಿ		810	
ಡಿಟೋ (ವಂದು ಅಡಿ ಡಿಟೋ) ..	ಡಿಟೋ		320	
ಕಂಭಗಳ ತಲೆಸುತ್ತು ಕಾರ್ನೀಸ್	ಡಿಟೋ		208	
ಜನಲು ಸುತ್ತು ತೆರಣಿ	ಡಿಟೋ		10·44	
ಪಜ್ಜಗಾರೆ	ಚದರ ಅಡಿ		84·54	
ತಾರಸು	ಡಿಟೋ		217·74	
ತ್ಯಾಗದ ಮರದ ಕೆಲಸ	ಸಲೆಅಡಿ		2062	
ಮೆಟ್ಟು ಚಪ್ಪಡಿ	ಚದರಡಿ		128	
ಕದಗಳು	ಡಿಟೋ		832	
ಜನಲುಗಳು—	ಡಿಟೋ		1120	
ಮೇಲೆ ಚಿಕ್ಕ ಜನಲುಗಳು	ಡಿಟೋ		336	
ಕನ್ನಡಿ ಅರ್ಧ ಕವಾ೯ ಜನಲುಗಳು	ಡಿಟೋ		416	
ಬಿದರ ಬಾಪೆ ಬೆನ್ನು ಬೆಪ್ಪೆಯಿಂದ ಮಾಡಿದ್ದು	ಡಿಟೋ		71·13	
ಮರದೆಂಚಿ ಕೆಲಸ				
ಜಿಂಕ್ ಕೊಳಾಯಿಗಳು				

ಟಿ. ಆರ್. ಸ್ಕಾಲ್ಡ್‌ವೆಲ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 9ನೇ ಡಿಸಂಬರ್ 1889.

ಗೋಲ್ಡ್‌ಮೈ೯ಯಾನೆ ಭಂಗಾರ ಗಣಿಗಳಿಗೆ ಸಾದೆ ಬಗ್ಗೇ.

ಇದರಿಂದ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟು ಬನ್ವೆರಿಂಗ್‌ಪ್ಯಾಟೆ ಮತ್ತು ಮೊಲೂರು ತಾಲ್ಲೂಕುಗಳಿಗೆ ಕೀರಿದ ಈ ಮಸಂದ್ರದ ಜಂಗಲ್ ವೈಕಿ ಈ ಕೆಳಗೆ ವಿವರಿಸಲ್ಪಟ್ಟಿರುವ 3 ಮತ್ತು 4ನೇ ನಂಬರು ಬ್ಲಾಕುಗಳಲ್ಲಿ ಬಂದು ಅಥವಾ ಎರಡು ವರುಷಗಳ ವರಿಗೆ ಸವ್ವೆದೆ ಕಡದುಕೊಳ್ಳುವ ಹಕ್ಕನ್ನು ಅಪೇಕ್ಷಿಸತಕ್ಕವರಿಂದ ಪ್ರತಿ ಬಂದು ಬ್ಲಾಕಿಗೂ ದೇರೆದೇರೆ ಬರುವ ಮೊಹರ್ ಮಾಡಿದ ದರ ಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು 1890ನೇ ಇಸವಿ ಜನವರಿ 22ನೇ ತಾರೀಖಿನವರಿಗೆ ತೆಗದುಕೊಳ್ಳುವರು.—

2. ಈ ಪ್ರತಿ ಬಂದು ಬ್ಲಾಕಿನಿಂದ ಸಂಣ ಸಂಣ ತುಂಡುಗಳಾಗಿ ಕೊಯಿದು ಪೇರಿಸಿದ 68 ಸಲೆ ಅಡಿಗಳುಳ್ಳ ಟ್ರ ಬಂದಕ್ಕೆ ಆಯಾ ದರಖಾಸ್ತುದಾರರು ಕೊಡಲು ಒಪ್ಪುವ ಸೀನಿಯರೇಜ್ ತೀರ್ವೆಯ ಹೆಚ್ಚು ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇ ರಬೇಕು. ನಗದು ಅಥವಾ ನೋಟು ಮೂಲಕ (300) ರೂಪಾಯಿಗಳ ಡಿಪಾಜಿಟ್ ವೊಬಲಿಗಿನ ಸಮೇತ ಬಾರದೆ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ.